# ಅಧ್ಯಾಯ -೭

# ಸಮಾರೋಪ

# ಅಧ್ಯಾಯ -೭

# ಸಮಾರೋಪ

ಕನ್ನಡ ಸಾಹಿತ್ಯದ ಕಾವ್ಯ ಪ್ರಕಾರಗಳಲ್ಲಿ ಪ್ರಮುಖವಾದುದು ಭಾವಗೀತೆ. ಕವಿಯ ಆತ್ಮಾಭಿವ್ಯಕ್ತಿಯ ಸಮರ್ಥ ಕಾವ್ಯ ರೂಪವಿದು. ಹಾಗೆ ನೋಡಿದರೆ ಎಲ್ಲ ಬಗೆಯ ಕಾವ್ಯ ರೂಪಗಳ ಮೂಲಮಾತೃಕೆ ಭಾವಗೀತೆ. ಗಾತ್ರ ಕಿರಿದಾದರು ಅವರೊಳಗಿನ ಭಾವನಾ ಜಗತ್ತು ಹಿರಿಯದು-ವಿಸ್ತಾರವಾದುದು. ಅದು ಮೂಲತಃ ಕವಿಯ ಒಳ ಮನಸ್ಸಿನ ದನಿಯ ಪ್ರತಿಧ್ವನಿ ! ಕನ್ನಡಕ್ಕೆ ಭಾವಗೀತೆ ಹೆಸರು ಹೊಸದಾದರೂ ಅದನ್ನು ಹೋಲುವ ಸಾಹಿತ್ಯ ರೂಪಿಕೆಗಳು ನಮ್ಮಲ್ಲಿ ಹಿಂದೆಯೆ ಇದ್ದವು. ಪಂಪನ ಬನವಾಸಿಯ ವರ್ಣನೆ, ಪಂಪಾಶತಕ -ರಕ್ಷಾಶತಕಗಳ ಕೆಲವು ಭಾಗಗಳು, ಹರಿಶ್ಚಂದ್ರ ಕಾವ್ಯದ ಚಂದ್ರಮತಿಯ ಪ್ರಲಾಪ, ಕುಮಾರವ್ಯಾಸ ಭಾರತದ ವಸ್ತ್ರಾಪಹರಣ ಸಂದರ್ಭದ ಕೃಷ್ಣಸ್ತುತಿ, ಲಕ್ಷ್ಮೀಶನ ಸೀತಾಪರಿತ್ಯಾಗದ ಸಂದರ್ಭ, ಅಕ್ಕಮಹಾದೇವಿ ಬಸವಣ್ಣನವರ ವಚನಗಳು, ದಾಸರ ಕೀರ್ತನೆ, ತರುವಾಯದ ತತ್ವಪದ ಜಾವಳಿಗಳನ್ನು ಕೂಡ ಇಲ್ಲಿ ಉಲ್ಲೇಖಿಸಬಹುದು. ಈಗಲೂ ಕವಿಗಳು ಸಕ್ರಿಯರಾಗಿರುವುದು ಭಾವಗೀತೆಗಳ ರಚನೆಯ ಮೂಲಕವೆ. ಹಾಗಾಗಿ ಇದೊಂದು ಜೀವಂತ ಕಾವ್ಯ ಪ್ರಕಾರ.

ಭಾವಗೀತೆಯ ಗಾಯನವೇ ಸುಗಮ ಸಂಗೀತ. ಈ ಹಿನ್ನೆಲೆಯಲ್ಲಿ ಶರಣರ ವಚನ ದಾಸರ - ಕೀರ್ತನೆ ಭಕ್ತಿಗೀತೆಗಳ ಗಾಯನ ಸುಗಮ ಸಂಗೀತ ಅಲ್ಲ. 'ಭಾವಗೀತೆಗಳ ಗಾಯನ ' ಎಂಬುದು ಸುಗಮ ಸಂಗೀತದ ಪರ್ಯಾಯ ನಾಮವೆಂಬುದನ್ನು ನೆನಪಿಡಬೇಕು. ಆರಂಭದಲ್ಲಿ ಶಾಸ್ತ್ರೀಯ ಸಂಗೀತದ ಹಿಡಿತದಲ್ಲಿದ್ದ ಭಾವಗೀತೆಯ ಗಾಯನವು ನಿಧಾನವಾಗಿ ಸ್ವರ ಸಂಯೋಜನೆಯ ತತ್ವದತ್ತ ಹೊರಳಿತು. ಇದರಿಂದ ಅದು ಅಪ್ಪಟ ಸಾಹಿತ್ಯನಿಷ್ಠ ಸಂಗೀತದ ಮಾದರಿಯಾಗಿ ಪರಿವರ್ತನೆಗೊಂಡಿತು. ಸುಗಮ ಸಂಗೀತಕ್ಕೆ ಒಂದು ಸ್ವತಂತ್ರ ಶೈಲಿಯಿದೆ, ಒಂದು ಸ್ವತಂತ್ರ ವ್ಯಕ್ತಿತ್ವವಿದೆ. ವಾಚನಕ್ಕೆ ಹತ್ತಿರವಾದ ಸಾಹಿತ್ಯದ ಅರ್ಥ-ಭಾವ -ನಾದಗಳನ್ನು ಹುಡುಕುವ ಅರ್ಥೈಸುವ ಭಾವಿಸುವ ಅಭಿವ್ಯಕ್ತಿಸುವ ಮೂಲಾಂಶಗಳು ಈ ಶೈಲಿಯಲ್ಲಿವೆ. ಭಾವಗೀತೆಯ ಹಾಡುಗಾರಿಕೆಯೆಂಬುದು ಕಾವ್ಯ ವಾಚನದ ಒಂದು ಸಾಧ್ಯತೆಯೆ ಆಗಿದೆ. ಇದು ಅನನ್ಯವಾದುದೂ ಹೌದು. ಪದಾರ್ಥದೊಂದಿಗೆ ನಾದಾರ್ಥವನ್ನು ಸಹ ಬಿಚ್ಚಿಡುವ ಸಾಧ್ಯತೆ ಕೇವಲ ವಾಚನದಲ್ಲಿ ಸಾಧ್ಯವಾಗುವುದಿಲ್ಲ. ಕಾವ್ಯ ರಚನೆಯಂತೆ ಕಾವ್ಯದ ಹಾಡುಗಾರಿಕೆ ಎಂಬುದು ಸೃಜನಾತ್ಮಕವಾದುದು. ಕಾವ್ಯ ರಚನೆಯ ಕ್ರಿಯೆ ಸೃಷ್ಟಿ ಯದಾದರೆ, ಅದನ್ನು ಅರ್ಥೈಸಿ ಭಾವಿಸಿ ಹಾಡುವುದು ಪ್ರತಿಸೃಷ್ಟಿಯಾಗುತ್ತದೆ. ಈ ಹಿನ್ನೆಲೆಯಲ್ಲಿ

ಸುಗಮ ಸಂಗೀತದ ಮೂರು ಮುಖ್ಯ ಆಶಯಗಳನ್ನು ಹೀಗೆ ದಾಖಲಿಸಬಹುದು.

೧. ಸುಗಮ ಸಂಗೀತ ಕಾವ್ಯ ವಾಚನದ ಒಂದು ಪರಿಣಾಮಕಾರಿ ವಿಧಾನ.

೨. ಸುಗಮ ಸಂಗೀತ ವಿಮರ್ಶೆಯ ಗೇಯ ರೂಪದ ಮಾದರಿಯಾಗಿದೆ.

೩. ಕಾವ್ಯ ರಚನೆ ಕ್ರಿಯೆ ಸೃಷ್ಟಿಯಾದರೆ, ಕಾವ್ಯ ಗಾಯನ ಪ್ರತಿಸೃಷ್ಟಿ ಯ ಪ್ರಕ್ರಿಯೆ.

ಕನ್ನಡವೂ ಸೇರಿದಂತೆ ಜಾಗತಿಕ ಸಂದರ್ಭದಲ್ಲಿ ಎಲ್ಲಾ ಭಾಷೆಗಳು ಕೂಡಾ ಹಾಡುಗಾರಿಕೆಯೊಂದಿಗೆ ಸಂಬಂಧವಿಟ್ಟುಕೊಂಡೇ ಬೆಳೆದುಬಂದಿವೆ. ಈ ಬಂಧುತ್ವವನ್ನು ಕನ್ನಡ ಕಾವ್ಯ ಆದಿಯಿಂದಲೂ ಉಳಿಸಿಕೊಂಡು ಬಂದಿದೆ. ಪ್ರಾಚೀನ ಕಾವ್ಯವನ್ನು ಹಾಡುವ ಪದ್ಧತಿ ಗಮಕ ವಾದರೆ ; ಹೊಸಗನ್ನಡ ಕವಿತೆಯ ಒಂದು ಪ್ರಧಾನ ಭಾಗವಾಗಿರುವ ಭಾವಗೀತೆಯ ಹಾಡುಗಾರಿಕೆಯು ಸುಗಮ ಸಂಗೀತ ಎನಿಸಿಕೊಂಡಿದೆ. ಹೊಸಗನ್ನಡ ಕಾವ್ಯದ ಮುಂಚಾಪದಲ್ಲಿ ನವೋದಯರು ಛಂದಸ್ಸಿನಲ್ಲಿ ಮಾಡಿದ ಹಲವು ಬಗೆಯ ಪ್ರಯೋಗಗಳಿಂದಾಗಿ, ಹೊಸ ಹೊಸ ಲಯಗಳು ಸಾಧಿತವಾದವು. ಇವು ಭಾವಗೀತೆಯ ಹಾಡುಗಾರಿಕೆಯ ಹೆಬ್ಬಾಗಿಲನ್ನು ತೆರೆದು ಭಾವ-ನಾದಗಳ ನದಿಯೊಂದು ಮೈತುಂಬಿ ಹರಿದುಬಂದಿದೆ. ನವ್ಯರ ಸಂದರ್ಭದಲ್ಲಿ ಕೊಂಚ ಮೌನವಾಗಿದ್ದ ಭಾವಗೀತೆ ತರುವಾಯ ಮತ್ತೆ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಗಾಯನದ ಮೂಲಕ ಅದು ಜನ -ಮನ ತಲುಪಿದೆ. ಕಾವ್ಯ ನಿಜ ಅರ್ಥದಲ್ಲಿ ಜನಪರವಾಗಿದೆ, ಜನರನ್ನು ತಲುಪಿದೆ.

'ಸುಗಮ ಸಂಗೀತ ಮತ್ತು ಆಧುನಿಕ ಕನ್ನಡ ಕವಿತೆ 'ಯ ಈ ವರೆಗಿನ ಅಧ್ಯಯನದಲ್ಲಿ ಕಂಡು ಬರುವ ಮೂಲಾಂಶಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು.

೧.ಕಾವ್ಯ ಮತ್ತು ಹಾಡುಗಾರಿಕೆಯ ಸಂಬಂಧ ಇಂದು ನೆನ್ನೆಯದಲ್ಲ. ಅದು ಕಾವ್ಯ ರಚನೆಯ ಆದಿಯಿಂದಲೂ ಹುಟ್ಟಿ ಬೆಳೆದುಬಂದಿದೆ.

೨.ಗಮಕದ ಆಧುನಿಕ ರೂಪವಾದ ಸುಗಮಸಂಗೀತ ಸಾಹಿತ್ಯಪರವಾದದ್ದು. ಇಲ್ಲಿಯ ಸಂಗೀತ ಕವಿತೆಗೆ ಹೊರಗಿನಿಂದ ತೊಡಿಸಿದ ವಸ್ತ್ರವಲ್ಲ. ಅದು ಕವಿತೆಯ ಅಂತರಂಗದಲ್ಲಿಯೇ ಹುದುಗಿರುವಂಥದ್ದು.

೩.ಸುಗಮ ಸಂಗೀತವೆಂಬುದು ಅಭಿಜಾತ ಸಂಗೀತದ ಉಪೋತ್ಪನ್ನವಲ್ಲ. ಅದು ಆಧುನಿಕ ಕಾವ್ಯ ಹುಟ್ಟುಹಾಕಿದ ಅಪರೂಪದ ಸಾಹಿತ್ಯ ನಿಷ್ಠ ಸಂಗೀತ ಮಾದರಿಯಾಗಿದೆ.

೪.ಸುಗಮ ಸಂಗೀತದ ಮೂಲ ಧಾತು ವಾದ ಕವಿತೆ ; ಪ್ರತಿಭಾವಂತ ಕವಿಯಿಂದ ರಚನೆಯಾದ ಭಾವಗೀತೆ ಎಂಬುದು ಇದರ ಗುಣಾತ್ಮಕ ಅಂಶವಾಗಿದೆ.

೫.ಕನ್ನಡ ಆಧುನಿಕ ಕಾವ್ಯ ಸಾಧಿಸಿದ ವಸ್ತುವೈವಿಧ್ಯ ಮತ್ತು ಭಾವ ಸಾವೀನ್ಯತೆಗಳಿಂದಾಗಿ ಸುಗಮ ಸಂಗೀತವು ಸಾಂಪ್ರದಾಯಿಕ ಸಂಗೀತವು ಉಂಟುಮಾಡಿದ್ದ ಭಕ್ತಿ ಮತ್ತು ಮೋಕ್ಷದ ಏಕತಾನತೆ ಮತ್ತದರ

ನೀರಸತೆಗಳನ್ನು ಯಶಸ್ವಿಯಾಗಿ ತೊಡೆದುಹಾಕಿದೆ.

೬.ಆಧುನಿಕ ಕನ್ನಡ ಕವಿಗಳು ಭಾವಗೀತೆಯ ರಚನೆಯ ಮೂಲಕ ಒಂದು ಹೊಸ ಕಾವ್ಯ ಪ್ರಕಾರವನ್ನಷ್ಟೆ ಅಲ್ಲದೆ, ಕಾವ್ಯಗಾಯನದ ಹೊಸ ಮಾದರಿಯೊಂದರ ಹುಟ್ಟಿಗೂ ಕಾರಣರಾಗಿದ್ದಾರೆ.

೭.ಕಾವ್ಯವನ್ನು ಹಾಡಲೇ ಬಾರದು ಎಂಬ ನವ್ಯರ ಆಕ್ಷೇಪಕ್ಕೆ ಯಾವ ಅರ್ಥವೂ ಇಲ್ಲ. ಅವರ ವಿರೋಧಕ್ಕಿರುವ ಕಾರಣಗಳೂ ಕೂಡ ದುರ್ಬಲವಾದವು, ಅವು ಸಮರ್ಥನೀಯವಲ್ಲ. ಅನಿಯತಲಯದಲ್ಲಿ ರಚನೆಯಾದ ಕಾವ್ಯವನ್ನು ಓದಿಕೊಳ್ಳಬಹುದು. ಆದರೆ ನಿಯತಲಯದಲ್ಲಿ ರಚನೆಯಾದ ಭಾವಗೀತೆಗಳು ಓದಲೂಬಹುದು ಹಾಡಲೂ ಬಹುದು. ಕವಿತೆಯೊಳಗಿನ ನಾದಾರ್ಥ ಹಾಡಿದಾಗ ಮಾತ್ರ ಹೊಮ್ಮುವಂಥದ್ದು. ಆದ್ದರಿಂದ ಕೇವಲ ಓದಿಕೊಳ್ಳಬಹುದಾದ ಕವಿತೆ ಬೇರೆ. ಓದಿನ ಜೊತೆಗೆ ಹಾಡಲೂ ಬಹುದಾದ ಭಾವಗೀತೆಗಳು ಬೇರೆ.ಆದ್ದರಿಂದ ಎಲ್ಲಾ ಬಗೆಯ ಕವಿತೆಗಳನ್ನು 'ಕೇವಲ ಓದಿಕೊಳ್ಳಬೇಕು 'ಅಥವಾ 'ಕೇವಲ ಹಾಡಿಕೊಳ್ಳಬೇಕು' ಎಂಬ ಎರಡೂ ಒತ್ತಾಯಗಳು ಅರ್ಥ ಹೀನವಾದವು.

ಕನ್ನಡ ಭಾವಗೀತೆಯ ಹಾಡುಗಾರಿಕೆಯ ಮೂರು ಮುಖ್ಯ ಶೈಲಿಗಳು ಪ್ರಚಾರದಲ್ಲಿವೆ. ಪೂರ್ವನಿಶ್ಚಿತವಾದ ಸಿದ್ಧಸ್ವರಗಳ ರಾಗ ವನ್ನು ಕವಿತೆಗೆ ಅಳವಡಿಸಿ ಹಾಡುವುದು. ಪದ್ಮಚರಣ - ಹೆಚ್. ಕೆ. ನಾರಾಯಣರು ಪ್ರತಿನಿಧಿಸುವ ಶೈಲಿಯಿದು. ಶಾಸ್ತ್ರೀಯ ಸಂಗೀತದ ಕಲಾವಿದರು ಇತ್ತೀಚಿನ ವರೆಗೂ ಇದೇ ಶೈಲಿಯ ಬೆನ್ನು ಹತ್ತಿದ್ದಾರೆ. ಇಲ್ಲಿ ಅನೇಕ ಸಲ ಸುಗಮ ಸಂಗೀತದ ಕಲಾವಿದರಿಗೆ ಪಠ್ಯದ ಸಾಹಿತ್ಯಿಕ ತಿಳುವಳಿಕೆಯೇ ಇರುವುದಿಲ್ಲ. ಇಂಥ ಸಂದರ್ಭದಲ್ಲಿ ಕೇಳುಗ ಕವಿತೆಯ ಅರ್ಥಕ್ಕಿಂತ ರಾಗದ ಮೋಡಿಗೆ ಒಳಗಾಗುವ ಅಪಾಯವೇ ಹೆಚ್ಚು. ಸಂಗೀತ- ಸಾಹಿತ್ಯಗಳೆರಡನ್ನೂ ಸಮಾನವಾಗಿ ಉಪಚರಿಸಿ ಹಾಡುವ ಶೈಲಿ ನಮ್ಮ ನಡುವೆ ಸಾಕಷ್ಟು ಪ್ರಚಾರದಲ್ಲಿದೆ. ಕೇಳುಗರ ಮನಸ್ಸನ್ನು ವ್ಯಾಪಿಸಿ ಮೋಡಿ ಮಾಡುವ ಮಾಧುರ್ಯ (Melody) ಈ ಶೈಲಿಯ ಮತ್ತೊಂದು ಲಕ್ಷಣವಾಗಿ ತೋರುತ್ತದೆ. ಪಿ.ಕಾಳಿಂಗರಾಯ, ಮೈಸೂರು ಅನಂತಸ್ವಾಮಿಯವರು ಈ ಶೈಲಿಯನ್ನು ಕಟ್ಟಿ ಬೆಳೆಸಿದ್ದಾರೆ. ಕವಿತೆಯ ಹಿನ್ನಲೆ, ಭಾವಾರ್ಥ ಕವಿಯ ಮನೋಧರ್ಮವನ್ನು ಬಲ್ಲ ಕಾವ್ಯ ರಸಿಕ ನಾದ ಗಾಯಕ ಹಾಡುವ ಸ್ವರಸಂಯೋಜನೆಯ ಶೈಲಿ ಮೂರನೆಯದು. ಸೃಜನಶೀಲ ಗಾಯಕ, ಸ್ವರಸಂಯೋಜಕ ಸಿ. ಅಶ್ವತ್ಥ್ ಈ ಶೈಲಿಯನ್ನು ಬೆಳೆಸಿ ಸುಗಮ ಸಂಗೀತವನ್ನು ಸೈದ್ಧಾಂತಿಕ ಚೌಕಟ್ಟಿನಲ್ಲಿ ಕಟ್ಟಿ ಬೆಳೆಸಿದ್ದಾರೆ. ಭಾವಗೀತೆ ಹಾಡುಗಾರಿಕೆಯ ಸಂದರ್ಭದಲ್ಲಿ ಇದು ಅಪೇಕ್ಷಣೀಯವಾದ ಅತ್ಯುತ್ತಮ ಶೈಲಿ ಎಂದು ಒಪ್ಪಿಕೊಳ್ಳಬಹುದು.

೧.ರಾಗ ಸಂಯೋಜನೆಯ ಶೈಲಿ.

೨.ಸಾಹಿತ್ಯ -ಸಂಗೀತಗಳ ಸಮಪಾಕಶೈಲಿ.

೩.ಸ್ವರ ಸಂಯೋಜನೆಯ ಶೈಲಿ.

ಈ ಮೂರೂ ಶೈಲಿಗಳಲ್ಲಿ ಸಾಕಷ್ಟು ಜನಪ್ರಿಯವಾದ ಸಂಯೋಜನೆಗಳು ಮೂಡಿಬಂದಿವೆ. ಆದರೆ ಸಾಹಿತ್ಯದ ಹಿತದೃಷ್ಟಿಯಿಂದ ನಾವು ಅಶ್ವತ್ಥ್ ಪ್ರತಿಪಾದಿಸುವ ಸ್ವರ ಸಂಯೋಜನೆಯ ಶೈಲಿಯನ್ನು ಒಪ್ಪಿಕೊಳ್ಳುವುದರಲ್ಲಿ ಸುಗಮ ಸಂಗೀತ ಮತ್ತು ಭಾವಗೀತೆಗಳೆಡರ ಶ್ರೇಯಸ್ಸಿದೆ.

ಈವರೆಗಿನ ಅಧ್ಯಯನದ ಫಲಶೃತಿಯಾಗಿ ಈ ಮೇಲಿನ ಮಹತ್ವದ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ಇದರೊಂದಿಗೆ ಬಿಡಿಲೇಖನಗಳ ಸಾರಲೇಖವನ್ನು ಆಯಾ ಉಪಶೀರ್ಷಿಕೆಯ ಕೊನೆಯಲ್ಲಿ ಸಂಗ್ರಹಿಸಿ ನೀಡುವ ಪ್ರಯತ್ನಮಾಡಲಾಗಿದೆ. ಒಟ್ಟಿನಲ್ಲಿ ಅಧ್ಯಯನದ ಆರಂಭದಲ್ಲಿ ಇಟ್ಟುಕೊಂಡಿದ್ದ ಕಾವ್ಯ ಸಂಗೀತದ ಸಂಬಂಧ, ಸುಗಮ ಸಂಗೀತದ ಸಾಹಿತ್ಯಿಕ ನೆಲೆಯ ಅನ್ವೇಷಣೆ, ನಿಯತ ಲಯದ ಭಾವಗೀತೆಗಳ ಸಾಹಿತ್ಯಿಕ ಸ್ವರೂಪ ಮತ್ತು ಕಾವ್ಯ ಸಂವಹನದ ಭಾಗವಾಗಿ ಭಾವಗೀತೆಯ ಹಾಡುಗಾರಿಕೆಯನ್ನು ಪರಿಭಾವಿಸುವ ಮುಖ್ಯ ಆಶಯಗಳನ್ನು ಇಲ್ಲಿ ಗಂಭೀರವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದಕ್ಕೆ ಪೂರಕವಾಗಿರುವ ಮಾಹಿತಿಗಳ ಮೂಲಕ ಕನ್ನಡ ಭಾವಗೀತೆಯ ಗಾಯನಕ್ಕೆ ಒಂದು ನಿರ್ದಿಷ್ಟವಾದ ಸೈದ್ಧಾಂತಿಕ ನೆಲಗಟ್ಟು ಸಿಕ್ಕಿದೆ ಎಂಬ ಭರವಸೆ ನಮಗಿದೆ.

**ಪ್ರತ್ಯೇಕ ಅಧ್ಯಯನದ ಸಾಧ್ಯತೆಗಳು :**

೧.ನವ್ಯೋತ್ತರ ಭಾವಗೀತೆಗಳ ಕಾವ್ಯ ಸ್ವರೂಪ.

೨.ಸುಗಮ ಸಂಗೀತದ ಅಭಿವ್ಯಕ್ತಿಯ ಭಿನ್ನ ನೆಲೆಗಳು.

೩.ಸುಗಮ ಸಂಗೀತಕ್ಕೆ ಕನ್ನಡ ಕವಿಗಳ ಕೊಡುಗೆ.

ಈ ಮೂರೂ ವಿಷಯಗಳಿಗೆ ಸಂಬಂಧಿಸಿದಂತೆ ಸಾಹಿತ್ಯದ ಅಭ್ಯಾಸಿಗಳು ಪ್ರತ್ಯೇಕ ಅಧ್ಯಯನ ಕೈಗೊಳ್ಳಬಹುದು. ಇದಕ್ಕೆ ಬೇಕಾದ ವಸ್ತು - ಸಾಮಾಗ್ರಿ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟಿದೆ.

**ಕೆಲವು ಸಲಹೆಗಳು :**

★ ಸರ್ಕಾರದ ಅಧೀನದಲ್ಲಿ ಸುಗಮಸಂಗೀತ ಪರಿಷತ್ತಿನ ಸ್ಥಾಪನೆಯ ಅಗತ್ಯವಿದೆ.

★ ಪ್ರತ್ಯೇಕ ಪಠ್ಯ ರಚನೆಯ ಮೂಲಕ ಸುಗಮ ಸಂಗೀತದ ಕಲಿಕೆಯನ್ನು ಅಧ್ಯಯನದ ಶಿಸ್ತಿಗೆ ಒಳಪಡಿಸಬಹುದು.

★ ಸುಗಮ ಸಂಗೀತ ಕುರಿತು ವಿಶೇಷ ಉಪನ್ಯಾಸ, ವಿಚಾರಗೋಷ್ಠಿ, ಕಾವ್ಯ-ಕುಂಚ- ಗಾಯನ ಮತ್ತು ತರಬೇತಿ ಶಿಬಿರಗಳನ್ನು ವ್ಯವಸ್ಥೆಗೊಳಿಸಬಹುದು.

★ ಸುಗಮ ಸಂಗೀತ ಪ್ರಾದೇಶಿಕ ಭಾಷಾ ನಿಷ್ಠತೆಯನ್ನು ವ್ಯಕ್ತಪಡಿಸುವುದರಿಂದ ಧ್ವನಿಸುರುಳಿ ಮತ್ತು ಸಿ.ಡಿ.ಗಳ ರಕ್ಷಾಪುಟದಲ್ಲಿ ವಿವರಗಳನ್ನು ಕನ್ನಡದಲ್ಲಿಯೇ ಮುದ್ರಿಸುವುದು.

★ ಭಾವಗೀತೆಗಳ ರಚನೆಕಾರ (ಕವಿ) ರಿಗೆ ಸಂದಾಯ ಮಾಡಬೇಕಾಗಿರುವ ರಾಯಧನ (ರಾಯಲ್ಟಿ) ವನ್ನು

ಸರ್ಕಾರವೇ ನಿಗದಿಪಡಿಸಿ ಸುಗಮ ಸಂಗೀತದ ಕಲಾವಿದರನ್ನು ಪ್ರೋತ್ಸಾಹಿಸಬಹುದು.

★ ಪುಸ್ತಕಗಳನ್ನು ಕೊಳ್ಳುವ ಮಾದರಿಯಲ್ಲಿ ಸರ್ಕಾರವೇ ಸುಗಮ ಸಂಗಿತದ ಧ್ವನಿಸುರುಳಿ ಸಿಡಿಗಳನ್ನು ಕೊಂಡುಕೊಂಡು ರಾಜ್ಯದ ಎಲ್ಲಾ ಗ್ರಂಥಾಲಯಗಳಿಗೆ ಪೂರೈಸಲು ಕ್ರಮಕೈಗೊಳ್ಳಬಹುದು.

★ ಧ್ವನಿಸುರುಳಿ ಸಿಡಿ ನಿರ್ಮಾಣದಲ್ಲಿ ಆಸಕ್ತಿಯಿರುವ ಕಲಾವಿದರನ್ನು ಪ್ರೋತ್ಸಾಹಿಸಲು ಸರ್ಕಾರ/ ಬ್ಯಾಂಕುಗಳು ಹಣಕಾಸಿನ ನೆರವು ನೀಡಬಹುದು.

★ ಕನ್ನಡ ಭಾವಗೀತೆಗಳ ಸಂಪುಟಗಳನ್ನು ವಿಶ್ವವಿದ್ಯಾನಿಲಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತುಗಳು ಪ್ರಕಟಿಸಬಹುದು.

★ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಸುಗಮ ಸಂಗೀತ ಕುರಿತ ವಿಚಾರಗೋಷ್ಠಿ ಮತ್ತು ಕಾವ್ಯ ಗಾಯನ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಬೇಕು.

★ ಆಕಾಶವಾಣಿ -ದೂರದರ್ಶನಗಳಲ್ಲಿ ಸುಗಮ ಸಂಗೀತದ ಪೂರ್ಣ ತಿಳುವಳಿಕೆ ಇರುವ, ಕಾರ್ಯಕ್ರಮ ನಿರ್ವಾಹಕರೊಬ್ಬರನ್ನು ನೇಮಿಸಿಕೊಳ್ಳಬೇಕು.

★ ದೂರದರ್ಶನ - ಆಕಾಶವಾಣಿಗಳು ಶ್ರೋತೃಗಳ ಮೆಚ್ಚಿನ ಭಾವಗೀತೆಗಳನ್ನು ಪ್ರಸಾರ ಮಾಡಬಹುದು.

★ ಕನ್ನಡ ಅಧ್ಯಾಪಕರಿಗೆ ಸುಗಮ ಸಂಗೀತದ ತರಬೇತಿ ನೀಡಲು ಕ್ರಮ ಕೈಗೊಳ್ಳಬಹುದು.

★ ಸುಗಮ ಸಂಗೀತ (ಭಾವಗೀತೆ ಗಾಯನ) ಸ್ಪರ್ಧೆಗಳಲ್ಲಿ ಶಾಸ್ತ್ರೀಯ ತಿಳುವಳಿಕೆಗಿಂತ ಸಾಹಿತ್ಯದ ತಿಳುವಳಿಕೆ ಇರುವ ಕಲಾವಿದರನ್ನು ತೀರ್ಪುಗಾರರನ್ನಾಗಿ ಆಯ್ಕೆ ಮಾಡಬೇಕು.

ಅಂತಿಮವಾಗಿ ಒಂದು ಮಾತು. ಸುಗಮ ಸಂಗೀತ ಆಧುನಿಕ ಕನ್ನಡ ಕಾವ್ಯದ ಒಂದು ಅವಿಭಾಜ್ಯ ಭಾಗ. ಭಾವಗೀತೆಯ ಹೊರತಾಗಿ ಅದಕ್ಕೆ ಪ್ರತ್ಯೇಕ ಅಸ್ತಿತ್ವವಿಲ್ಲ. ಅದರ ಧಾತು ಭಾವಗೀತೆ. ಕವಿತೆಯೊಳಗೆ ಅವಿತಿರುವ ಸಂಗೀತವೇ ಅದರ ದನಿ. ಕವಿತೆಯೊಳಗಿನ ಅರ್ಥ -ಭಾವ - ನಾದಗಳನ್ನು ಹೊರಹೊಮ್ಮಿಸುವುದು ಸುಗಮ ಸಂಗೀತದ ಬಹುಮುಖ್ಯ ಆಶಯ. ಅದುವೆ ಮೊದಲ ಮತ್ತು ಅಂತಿಮ ಗುರಿ. ಆದರೆ ಭಾವಗೀತೆ ಮುಖ್ಯವಾಗಿ ಕಾವ್ಯವಾಗಿರಬೇಕು. ಅದು ಕೇವಲ ಹಾಡಾಗಬಾರದು. "ಹಾಡುವುದಕ್ಕಾಗಿ ಪ್ರತ್ಯೇಕವಾಗಿ ಕವಿತೆ ಬರೆಯುವುದರಿಂದ ಕಾವ್ಯ ಗುಣ ಕುಂಠಿತವಾಗುತ್ತದೆ..... ಭಾವಗೀತೆ ಪ್ರಕಾರವನ್ನು ಜನಪ್ರಿಯಗೊಳಿಸಿದ ಕುವೆಂಪು ಬೇಂದ್ರೆ ರಾಜರತ್ನಂ ಮುಂತಾದ ಕವಿಗಳು ಹಾಡುವುದಕ್ಕಾಗಿಯೇ ಕವಿತೆ ಬರೆಯಲಿಲ್ಲ. ಕವಿಗಳಾದ ನಾವು, ನಮ್ಮ ಪಾಡಿಗೆ ಕವಿತೆ ಬರೆಯುತ್ತೇವೆ. ಬೇಕಾದರೆ ಗಾಯಕರು ಅವನ್ನು ಹಾಡು ಮಾಡಿಕೊಳ್ಳಲಿ. ಹಾಡುವುದಕ್ಕೆಂದೇ ಕಟ್ಟಿದ ಕವಿತೆಗಳಲ್ಲಿ ಕಾವ್ಯ ನೈಪುಣ್ಯತೆ ಇಲ್ಲವಾಗುತ್ತದೆ " - (ಉಲ್ಲೇಖ :ಪ್ರಜಾವಾಣಿ,ದೈನಿಕ.ದಿನಾಂಕ ೦೮-೦೨-೦೪.ಪುಟ೨೯) ಎಂದು ಇತ್ತೀಚೆಗೆ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರ ಸಮಗ್ರ ಕಾವ್ಯದ ಬಿಡುಗಡೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಹಿರಿಯ ಕವಿ ಜಿ.ಎಸ್.ಶಿವರುದ್ರಪ್ಪನವರ

ಈ ಮಾತುಗಳನ್ನು ಕನ್ನಡ ಕಾವ್ಯ ಜಗತ್ತು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಾಗಿದೆ.

ಒಟ್ಟಿನಲ್ಲಿ ಸುಗಮ ಸಂಗೀತವನ್ನು ಆಧುನಿಕ ಕನ್ನಡ ಕಾವ್ಯದ ಒಂದು ಭಾಗವಾಗಿ ನೋಡಿರುವ ಮತ್ತು ಸಾಹಿತ್ಯಿಕ ನೆಲೆಯಲ್ಲಿ ಭಾವಗೀತೆಯ ಗಾಯನಕ್ಕೆ ಸೈದ್ಧಾಂತಿಕ ಚೌಕಟ್ಟನ್ನು ಒದಗಿಸಿಕೊಟ್ಟಿರುವ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಕಾವ್ಯ ಮತ್ತು ಸುಗಮ ಸಂಗೀತಗಳ ಇತಿಹಾಸದಲ್ಲಿ ಇದೊಂದು ಮಹತ್ವಪೂರ್ಣ ಅಧ್ಯಯನವೆಂಬ ವಿನೀತ ಭಾವನೆ ನಮ್ಮದಾಗಿದೆ.